ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲು ಇರುವ ತೊಂದರೆಗಳೇನು?

ಆ) ಸರ್ಕಾರ ಇದರ ಬಗ್ಗೆ ಗಮನ ಹರಿಸುವುದೆ?

ಇ) ಹಾಗಿದ್ದಲ್ಲಿ ಈ ಪ್ರಕಾರ್ಯವನ್ನು ಎಂದು ಮಾಡಲಾಗುವುದು?

ಈ) ಈ ವರ್ಷದ ಆಯವ್ಯಯದಲ್ಲಿ ಇದನ್ನು ಸೇರಿಸಲಾಗುವುದೆ?

ಉತ್ತರ

ಅ) ಸಂಖಿಗೆ ಮತ್ತು ಮಾವಿನಕೆರೆ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದನ್ನು ಸರ್ಕಾರ ಈ ಸಾಲಿನಲ್ಲಿ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸುವ ಸಮಯದಲ್ಲಿ ಪರಿಗಣಿಸಲಾಗುವುದು. ತಂಡಗ ಗ್ರಾಮದಲ್ಲಿ ಪಶು ಚಿಕಿತ್ಸಾಲಯವಿದ್ದು. ಮೇಲ್ದರ್ಜೆಗೇರಿಸುವ ಪ್ರಸ್ತಾಪ ಸರ್ಕಾರದಲ್ಲಿರುವುದಿಲ್ಲ.

ಆ) ಹೌದು.

ಇ) ಹಂತ ಹಂತವಾಗಿ ಮಾಡಲಾಗುವುದು.

ಈ) ಪ್ರಸಕ್ತ ಸಾಲಿನಲ್ಲಿ ಯಾವುದೇ ತೀರ್ಮಾನ ತೆಗೆದುಕೊಳ್ಳಲಾಗುವುದು.

ಬೆಳಗಾಂ ಜಿಲ್ಲೆಯ ನೇಕಾರರಿಗೆ ಸೌಲಭ್ಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 419(256)

ಸದಸ್ಯರ ಹೆಸರು : ಶ್ರೀ ಮನೋಹರ ಪುನಪ್ಪ ಕಾರೋಲ್‌ಕರ್(ಉಚ್ಚಗಾಂವ್)

ಉತ್ತರಿಸುವ ಸಚಿವರು : ಶ್ರೀ ಎಂ.ಮಹದೇವ್(ರೇಷ್ಮೆ ಹಾಗೂ ಜವಳಿ ಸಚಿವರು)

ಪ್ರಶ್ನೆ

ಅ) ಮಹಾರಾಷ್ಟ್ರದಲ್ಲಿರುವಂತೆ ನೇಕಾರರಿಗೆ ಇರುವ ಸೌಲಭ್ಯಗಳ ಕೊರತೆಯಿಂದಾಗಿ ಬೆಳಗಾಂ ಜಿಲ್ಲೆಯ ನೇಕಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಅಂತಹ ಘಟನೆಗಳನ್ನು ನಿಲ್ಲಿಸಲು ಕೈಗೊಂಡ ಕ್ರಮಗಳೇನು?

ಆ) ರೋಗಗ್ರಸ್ಥ ಕೈಮಗ್ಗ ಉದ್ದಿಮೆಗಳನ್ನು ಪುನಶ್ಚೇತನಗೊಳಿಸಲು ಕೈಗೊಂಡಿರುವ ಕ್ರಮಗಳೇನು?

ಇ) ನೇಕಾರರಿಗೆ ಕಚ್ಚಾ ಪದಾರ್ಥಗಳನ್ನು ಪೂರೈಸಿ, ಅವರಿಂದ ಸಿದ್ಧಪಡಿಸಿದ ಬಟ್ಟೆಗಳನ್ನು ಖರೀದಿಸುವ ಪ್ರಸ್ತಾಪನೆ ಸರ್ಕಾರದ ಮುಂದಿದೆಯೇ?

ಉತ್ತರ

ಅ) ಬೆಳಗಾಂ ಜಿಲ್ಲೆಯಲ್ಲಿ 5 ಜನ ವಿದ್ಯುತ್‌ಮಗ್ಗ ನೇಕಾರರು ಹಣಕಾಸು ಸಂಸ್ಥೆ : ಖಾಸಗಿ ಲೇವಾದೇವಿಗಾರರಿಂದ ತೆಗೆದುಕೊಂಡ ಸಾಲ ಕಟ್ಟಲಾಗದೆ, ಆತ್ಮಹತ್ಯೆ ಮಾಡಿಕೊಂಡಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಆ) ರೋಗಗ್ರಸ್ಥ ನೇಯ್ಗೆ ಉದ್ದಿಮೆಗಳನ್ನು ಪುನಶ್ಚೇತನಗೊಳಿಸಲು ಕೈಗೊಂಡಿರುವ ಕ್ರಮಗಳು ಯಾವುವೆಂದರೆ:

1) ರೋಗಗ್ರಸ್ಥ ಕೈಮಗ್ಗ : ವಿದ್ಯುತ್ ಮಗ್ಗ ನೇಯ್ಗೆ ಕೈಗಾರಿಕೆಗಳನ್ನು ಸಹಕಾರಿ ಸಂಘಗಳು: ಕೈಮಗ್ಗ ಅಭಿವೃದ್ಧಿ ನಿಗಮದಡಿ ತರಲು ಯೋಜಿಸಲಾಗುವುದು.

2) ಅಂತಹ ಘಟಕಗಳ ಪುನಶ್ಚೇತನಕ್ಕೆ ಹಣಕಾಸು ಮಂಜೂರಾತಿಗೆ ಬ್ಯಾಂಕುಗಳ ಭಾಗವಹಿಸುವಿಕೆಗೆ ಯೋಜಿಸಲಾಗುವುದು.

3) ಅಂತಹ ಕೈಗಾರಿಕೆಗಳ ಸಮೀಕ್ಷೆ ಕೈಗೊಳ್ಳಲು ಹಾಗೂ ಕ್ರಿಯಾ ಯೋಜನ ರೂಪಿಸಲು ಯೋಜಿಸಲಾಗುವುದು.

ಇ) ಕರ್ನಾಟಕ ರಾಜ್ಯ ವಿದ್ಯುತ್‌ಮಗ್ಗ ಅಭಿವೃದ್ಧಿ ನಿಗಮವು ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಸಹಕಾರಿ ಸಂಘಗಳು ಹಾಗೂ ವಿದ್ಯುತ್‌ಮಗ್ಗ ಘಟಕಗಳ ಮೂಲಕ ಶಾಲೆಗಳಿಗೆ ಬೇಕಾದ ಸಮವಸ್ತ್ರ ಬಟ್ಟೆಯ ಸರಬರಾಜು ಆದೇಶವನ್ನು ನೇಕಾರರಿಗೆ ಪೂರೈಸುತ್ತಿದೆ. ಅವರು ತಯಾರು ಮಾಡಿದ ಬಟ್ಟೆಗಳನ್ನು ಶಿಕ್ಷಣ ಇಲಾಖೆಗೆ ನಿಗಮದ ಮುಖಾಂತರ ಸರಬರಾಜು ಮಾಡಲಾಗುತ್ತಿದೆ. ಇದಲ್ಲದೆ ಜಿಲ್ಲೆಯಲ್ಲಿನ ಕಾರ್ಯನಿರತ ವಿದ್ಯುತ್‌ಮಗ್ಗ ಸಹಕಾರಿ ಸಂಘಗಳು ನೇಕಾರರಿಗೆ ಕಚ್ಚಾಮಾಲನ್ನು ಕೊಟ್ಟು ಸಿದ್ಧಪಡಿಸಿದ ಬಟ್ಟೆಗಳನ್ನು ಮಾರಾಟ ಮಾಡುವ ಕಾರ್ಯವನ್ನು ನಿರ್ವಹಿಸುತ್ತಿವೆ. ಎನ್‌ಸಿಡಿಸಿ ಪ್ರಾಯೋಜಿತ ಯೋಜನೆಯಡಿ ವಿದ್ಯುತ್‌ಮಗ್ಗ ಸಂಕೀರ್ಣ ಯೋಜನೆಯನ್ನು ಸಹ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.